**ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.**

**ಸಿ.ಸಿ.ನಂಃ 64/2026**

**ಫಿರ್ಯಾದುದಾರರು**

ಸರಕಾರದ ಪರವಾಗಿ,
ಮುಂಡಗೋಡ ಪೋಲಿಸ್ ಠಾಣೆ,
ಮುಂಡಗೋಡ.

**– ವಿರುದ್ಧ –**

**ಆರೋಪಿತ**

ನಾಗರಾಜ ತಂದೆ ಶಂಕರ ಠಾಣೆಕರ,
33 ವರ್ಷ, ಉಃ ಹೋಟೆಲ್ ವ್ಯಾಪಾರ,
ಸಾಃ ನಂದಿಕಟ್ಟಾ, ತಾಃ ಮುಂಡಗೋಡ.

**: ಆರೋಪಣೆ :**

ಅಕ್ಷತಾ ಸಿ.ಆರ್. ಬಿ.ಬಿ.ಎ.,ಎಲ್.ಎಲ್.ಬಿ.(ಹೊನರ್ಸ) ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಮುಂಡಗೊಂಡ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ–

ದಿನಾಂಕಃ 03-01-2026 ರಂದು 13-30 ಗಂಟೆಗೆ ಮುಂಡಗೋಡ ಪೋಲಿಸ ಠಾಣೆಯ ಸರಹದ್ದಿನಲ್ಲಿ ಬರುವ ಮುಂಡಗೋಡ ತಾಲೂಕಿನ ನಂದಿಕಟ್ಟಾ ಗ್ರಾಮದ ಕೆಂದಲಗೇರಿ ರಸ್ತೆಯ ಚಂದು ಎಗ್ ರೈಸ್ ಎದುರಿನ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನಾದ ನೀವು ಯಾವುದೇ ಪಾಸ್ ಅಥವಾ ಪರ್ಮಿಟ್ ಇಲ್ಲದೇ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಮದ್ಯ ಸೇವಿಸಲು ಅನವು ಮಾಡಿಕೊಟ್ಟಿದ್ದಲ್ಲದೇ, ನಿಮ್ಮ ತಾಬಾ 90 ಎಂ.ಎಲ್ ಅಳತೆಯ Original Choice Delux Whisky 04 ಪೌಚುಗಳು, 90 ಎಂ.ಎಲ್ ಅಳತೆಯ Original Choice Delux Whisky 03 ಖಾಲಿ ಪೌಚ, 02 ಪ್ಲಾಸ್ಟಿಕ ಗ್ಲಾಸ, ಒಂದು ಖಾಲಿ ನೀರಿನ ಬಾಟಲಿ ಇಟ್ಟುಕೊಂಡು ಕರ್ನಾಟಕ ಅಬಕಾರಿ ಕಾಯ್ದೆ 1965, ಕಲಂ 32(3) ಸಹಿತ 15(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿದ್ದೀರಿ ಎಂದು ಅಪಾದಿಸಲಾಗಿದೆ.

ಮೇಲೆ ಹೇಳಲಾದ ಆಪಾದನೆ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಅದರ ವಿಚಾರಣೆ ಆಗಬೇಕೆಂದು ನಾನು ನಿರ್ದೇಶಿಸಿದ್ದೇನೆ.

ಪ್ರಶ್ನೆ 1– ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –
ಆರೋಪಿ–

ಪ್ರಶ್ನೆ 2– ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –
ಆರೋಪಿ–

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 13–03–2026 ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ